ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ ೩ನೇ ಸೆಪ್ಟೆಂಬರ್ ೧೯೯೧ ಭಾದ್ರಪದ ೧೨, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ ೯.೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ಎಸ್.ಎಂ. ಕೃಷ್ಣ)** ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಮಾಗಡಿ ತಾಲ್ಲೂಕಿನಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಮನೆಗಳು

2088 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಮತ್ತಿಕೆರೆಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರು ಮನೆಗಳನ್ನು ನಿರ್ಮಿಸಿದ್ದು, ಅವುಗಳಲ್ಲಿ ಅನಧಿಕೃತ ವ್ಯಕ್ತಿಗಳು ವಾಸವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ಬಿಡಿಸಿ ಗೃಹ ಮಂಡಳಿಯು ಆ ಮನೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಯಾವಾಗ ಹಂಚಿಕೆ ಮಾಡಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ ಮಾಗಡಿ ತಾಲ್ಲೂಕಿನ ಮತ್ತಿಕೆರೆಯಲ್ಲಿ ಕರ್ನಾಟಕ ಗೃಹಮಂಡಳಿಯವರು ಮನೆಗಳನ್ನು ಕಟ್ಟಿದ್ದಾರೆಯೇ ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದಾರೆ. ಆದರೆ 1984ರಲ್ಲಿಯೇ ಅಲ್ಲಿ ಹತ್ತು ಮನೆಗಳನ್ನು ಮಂಡಳಿಯವರು ನಿರ್ಮಿಸಿದ್ದಾರೆ. ಆದರೆ ಇದುವರೆಗೂ ಆ ಮನೆಗಳನ್ನು ಯಾರಿಗೂ ಕೂಡ ವಹಿಸಿಕೊಡದಿದ್ದ ಕಾರಣ ಅಲ್ಲಿ ಆ ಕುರಿತು ಗಲಾಟೆ ಆಗುತ್ತಾ ಇದೆ. ಅನಧಿಕೃತವಾಗಿ ಕೆಲವರು ಆ ಮನೆಗಳಿಗೆ ಹೋಗಿ ಸೇರಿಕೊಂಡಿದ್ದಾರೆ. ಆ ಮನೆಗಳನ್ನು ಗೃಹ ನಿರ್ಮಾಣ ಮಂಡಳಿಯವರು ಕಟ್ಟಿದ್ದಾರೆ. ಆದರೆ ಸಚಿವರು ಇಲ್ಲ ಎಂದು ಹೇಳುತ್ತಿದ್ದಾರೆ. ಇದು ಸಚಿವರು ಕೊಡುವ ತಪ್ಪು ಮಾಹಿತಿ ಎಂದು ಹೇಳಬೇಕಾಗುತ್ತದೆ. ಹಾಗಿದ್ದಲ್ಲಿ ಅಲ್ಲಿ ಮನೆಗಳು ಇವೆಯೇ ಇಲ್ಲವೇ ಎಂಬುದನ್ನು ದಯಮಾಡಿ ತಿಳಿಸಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಮತ್ತಿಕೆರೆಯಲ್ಲಿ ಗೃಹ ನಿರ್ಮಾಣ ಮಂಡಳಿಯವರು ಒಟ್ಟು ಆರು ಮನೆಗಳನ್ನು ನಿರ್ಮಿಸಿದ್ದಾರೆ. 1983ರಲ್ಲಿ ಅದನ್ನು ಪಿಡಬ್ಲ್ಯುಡಿ ಯವರಿಗೆ ಹ್ಯಾಂಡ್‌ಓವರ್ ಮಾಡಿದ್ದಾರೆ. ಆದುದರಿಂದ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ಮಂಡಳಿಯವರು ಬಿಡಿಸಿ ವಶಕ್ಕೆ ತೆಗೆದುಕೊಳ್ಳುತ್ತಾರೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೇನೆ. ಆದುದರಿಂದ ಮಾನ್ಯ ಸದಸ್ಯರು ದಯವಿಟ್ಟು ಪಿಡಬ್ಲ್ಯುಡಿಯವರನ್ನು ವಿಚಾರಿಸಿದರೆ ಅವರಿಗೆ ಸಮರ್ಪಕವಾದ ಉತ್ತರವು ಸಿಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ : ನಾನು ಪಿಡಬ್ಲ್ಯುಡಿಯವರೊಡನೆಯೂ ಕೂಡ ಪತ್ರ ವ್ಯವಹಾರ ಮಾಡಿದ್ದೇನೆ. ಅವರು ಈ ಮನೆಗಳು ನಮಗೆ ಸೇರಿದ್ದಲ್ಲ ಎಂದು ಹೇಳುತ್ತಿದ್ದಾರೆ. ವಿದ್ಯಾಇಲಾಖೆಯವರು ಕೂಡ ಈ ಮನೆಗಳು ನಮಗೆ ಸೇರಿಲ್ಲ ಎಂದು ಹೇಳುತ್ತಿದ್ದಾರೆ. ಸರಕಾರದ ವತಿಯಿಂದ ಹಣವನ್ನು ಖರ್ಚು ಮಾಡಿ ಕಟ್ಟಿಸಿದ ಮನೆಗಳು ಈ ರೀತಿ ಯಾರಿಗೂ ಸೇರದೆ ಇದ್ದು.....

ಅಧ್ಯಕ್ಷರು : ಯಾರಿಗೂ ಸೇರದಿದ್ದರೆ ಅದರಲ್ಲಿ ಯಾರಾದರೂ ಇರಲಿ ಬಿಡಿ.

ಶ್ರೀ ಹೆಚ್.ಎಂ. ರೇವಣ್ಣ : ಸರಕಾರದ ಹಣದಿಂದ ಖರ್ಚು ಮಾಡಿ ಕಟ್ಟಿದ ಮನೆಗಳನ್ನು ಸರಿಯಾದ ರೀತಿಯಲ್ಲಿ ವಿತರಿಸದೆ ಬೇಜವಾಬ್ದಾರಿತನವನ್ನು ಅಧಿಕಾರಿಗಳು ತೋರಿದರೆ ಹೇಗೆ? ನಾನು ಪಿಡಬ್ಲ್ಯುಡಿ ಯವರನ್ನು ಮತ್ತು ವಿದ್ಯಾ ಇಲಾಖೆಯವರನ್ನು ವಿಚಾರಿಸಿದ್ದೇನೆ.

ಅಧ್ಯಕ್ಷರು : ಪಿಡಿಬ್ಲ್ಯುಡಿಯವರು ಏನು ಹೇಳುತ್ತಾರೆ?

ಶ್ರೀ ಹೆಚ್.ಎಂ. ರೇವಣ್ಣ : ಅವರು ನಮಗೆ ಹೌಸಿಂಗ್ ಬೋರ್ಡಿನಿಂದ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ಆ ಮನೆಗಳಲ್ಲಿ ಕೆಲವು ಮೇಸ್ತ್ರಿಗಳು ಹೋಗಿ ಕೊಂಡು ಹೊಡೆದಾಡುತ್ತಿದ್ದಾರೆ. ಬಲಾಢ್ಯ ಮೇಸ್ತ್ರಿರುಗಳು ಪಾತ್ರೆಗಳನ್ನೆಲ್ಲಾ ಹೊರಗೆ ಹಾಕಿ ಮನೆಯೊಳಗೆ ಸೇರಿಕೊಂಡಿದ್ದಾರೆ.

ಅಧ್ಯಕ್ಷರು : ತಾವೂ ಬಲಾಢ್ಯರಿದ್ದೀರಿ, ಮೇಸ್ತ್ರಿರುಗಳನ್ನು ಸೆಟಲ್ ಮಾಡಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಸ್ವಲ್ಪ ಹೊತ್ತು ಹೊರಗೆ ಹೋಗಿ ಬರುವ ಅವಶ್ಯಕತೆ ಇದ್ದುದರಿಂದ ನನ್ನ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳುವ ಬಗ್ಗೆ ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಆಯಿತು, ತೆಗೆದುಕೊಳ್ಳೋಣ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಉಳಿತಾಯ ಯೋಜನೆಯಲ್ಲಿ ಸಂಗ್ರಹಿಸಿದ ಮೊತ್ತ

2109 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಣ್ಣ ಉಳಿತಾಯ ಮತ್ತು ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1987-88,1988-89,1989-90, 1990-91 ರಲ್ಲಿ ಸಣ್ಣ ಉಳಿತಾಯ ಯೋಜನೆಯಲ್ಲಿ ಸಂಗ್ರಹವಾದ ಹಣವೆಷ್ಟು? (ವರ್ಷವಾರು ವಿವರಬೇಕು)*
2. *ಸಣ್ಣ ಉಳಿತಾಯದಲ್ಲಿ ದಕ್ಷಿಣ ಕನ್ನಡ ಯಾವ ಸ್ಥಾನದಲ್ಲಿದೆ.*
3. *ಮುಂದಕ್ಕೆ ಇನ್ನೂ ಪ್ರಗತಿಯಾಗಲು ಹೊಸ ಹೊಸ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆಯೇ? ಹಾಗಿದ್ದಲ್ಲಿ ಅವು ಯಾವುವು?*